## 22. ಕೊನೆಗೂ ಅನ್ವರ್ ಮಾಣಿಪ್ಪಾಡಿ ವರದಿ ಮಂಡನೆ

ವಕ್ಫ್ ಬೋರ್ಡ್ ಆಸ್ತಿ ಕಬಳಿಕೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ತೀವ್ರ ಸಂಚಲನ ಮೂಡಿಸಿದ್ದ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿದ್ದ ಅನ್ವರ್ ಮಾಣಿಪ್ಪಾಡಿ ವರದಿಯನ್ನು ಸರ್ಕಾರ ವಿಧಾನಸಭೆಯಲ್ಲಿ ಮಂಡಿಸಿತು.

ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ವಕ್ಫ್ ಬೋರ್ಡ್ ಆಸ್ತಿ ಕಬಳಿಕೆಗೆ ಸಂಬಂಧಪಟ್ಟಂತೆ ಅನ್ವರ್ ಮಾಣಿಪ್ಪಾಡಿ ಅವರು 2012ರಲ್ಲೇ ವಿಶೇಷ ವರದಿ ಸಲ್ಲಿಸಿದ್ದರು. ಪ್ರಭಾವಿ ರಾಜಕಾರಣಿಗಳು ವಕ್ಫ್ ಆಸ್ತಿ ಕಬಳಿಸಿರುವುದು ಹಾಗೂ ಅದರಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂಬುದಾಗಿ ಉಲ್ಲೇಖಿಸಲಾಗಿದೆ. ಕೇಂದ್ರದ ಮಾಜಿ ಸಚಿವರಾದ ರೆಹಮಾನ್ ಖಾನ್, ಸಿ.ಎಂ. ಇಬ್ರಾಹಿಂ, ಮಾಜಿ ಸಂಸದ ನರಸಿಂಗರಾವ್ ಸೂರ್ಯವಂಶಿ, ಮಾಜಿ ಸಚಿವ ಆರ್. ರೋಷನ್ ಬೇಗ್, ಶಾಸಕ ಎನ್.ಎ. ಹ್ಯಾರಿಸ್ ಸೇರಿದಂತೆ ಹಲವರ ಹೆಸರು ವರದಿಯಲ್ಲಿದೆ.

**ವರದಿಯಲ್ಲಿರುವ ಪ್ರಮುಖ ವಿವರ:**

- ಬೀದರ್ ಜಿಲ್ಲೆಯಲ್ಲಿ 2,586 ಎಕರೆ ಪೈಕಿ 1803 ಎಕರೆ ಒತ್ತುವರಿ: ಬೀದರ್‌ನ ಖ್ವಾಜಾ ಅಬ್ದುಲ್ ಫೈಜ್ ದರ್ಗಾಗೆ ಸೇರಿದ 180 ಎಕರೆ ಖಬರಸ್ತಾನ್ (ಸರ್ವೇ ನಂ.73)/ ಒತ್ತುವರಿದಾರರು–ನಿಸಾರ್ ಆಹಮದ್, ಫೈರೋಜ್‌ಖಾನ್ ಹಾಗೂ ಇತರರು.
- ಫತ್ತೇಹುಲ್ಲಾ ಖಾದಿರ್ ದಾದಾಪೀರ್ ದರ್ಗಾಗೆ ಸಂಬಂಧಪಟ್ಟಂತೆ ಅಲಿಯಾಬಾದ್ ಗ್ರಾಮದ 8,36ಎಕರೆ (ಸರ್ವೇ ನಂ.73)/ಒತ್ತುವರಿದಾರರು–ಮಾಜಿ ಸಂಸದ ನರಸಿಂಗರಾವ್ ಸೂರ್ಯವಂಶಿ.
- ಬೀದರ್‌ನ ಗುಲ್ಲರ್ ಹವೇಲಿ (ಸರ್ವೇ ನಂ.31/ಡಿ) ಒತ್ತುವರಿದಾರರು – ನಿವೃತ್ತ ಐಪಿಎಸ್ ಅಧಿಕಾರಿ ಹಜರತ್ ಖಾಜಾ ಬಂಡೆನವಾಜ್ ದರ್ಗಾಗೆ ಸೇರಿದ 8.34 ಎಕರೆ (ಸರ್ವೇ ನಂ.12)/ ಒತ್ತುವರಿದಾರರು – ಮಾಜಿ ಸಚಿವ ದಿ. ಖಮರುಲ್ ಇಸ್ಲಾಂ.
- ವಕ್ಕಲಗೇರೆ ದರ್ಗಾ ಹಜರತ್ ಅಬೇರ್ ಸಯೀದ್ ಜುನೈದಿ 2 ಎಕರೆ ವಿಸ್ತೀರ್ಣ (ಸರ್ವೇ ನಂ.13)/ ಒತ್ತುವರಿದಾರರು ಖನೀಜ ಫಾತಿಮಾ (ಖಮರುಲ್ ಇಸ್ಲಾಂ ಪತ್ನಿ)
- ಬ್ರಹ್ಮಪುರ ಗ್ರಾಮ ಹಜರಾತ್ ಖ್ವಾಜಾ ಬಂಡೆ ನವಾಜ್‌ನ ಗೇಶುದರಾಜ್ (ಸರ್ವೆ.ನಂ.33/1, 33/2, 33/3, 33/4, 33/5) ಒತ್ತುವರಿದಾರರು ಮಾಜಿ ಸಂಸದ ಇಕ್ಬಾಲ್ ಅಹಮದ್ ಸರಡಗಿ.
- ಭಾಗಿಯಾದವರು – ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ, ಮಾಜಿ ಸಿಎಂ. ಧರ್ಮಸಿಂಗ್, ದಿ.ಖಮರುಲ್ ಇಸ್ಲಾಂ, ಸಿ.ಎಂ. ಇಬ್ರಾಹಿಂ, ಅಲ್ಹಜ್ ಸೈಯ್ಯದ್ ಯಾಸಿನ್, ಕಲಬುರಗಿಯ ಉಪ ಮೇಯರ್ ಅಷ್ಪಕ್ ಅಹಮದ್ ಚುಲ್ಬುಲ್
- ಬೆಂಗಳೂರು ನಗರ ಜಿಲ್ಲೆ ವಿಂಡ್ಸರ್ ಮ್ಯಾನರ್ ಹೋಟೆಲ್ / ಆಸ್ತಿ ಸಂಖ್ಯೆ 25, ಸ್ಯಾಂಕಿ ರಸ್ತೆ, ವಿಸ್ತೀರ್ಣ ಸುಮಾರು 4 ಎಕರೆ/ ಒತ್ತುವರಿದಾರರು ಎ. ಗಂಗಾರಾಮ್ ಮೊನಾರ್ಕ್ ಕಾರ್ಪೋರೇಷನ್, ವಿಂಡ್ಸರ್ ಮ್ಯಾನರ್ ಹೋಟೆಲ್, ಭಾಗಿಯಾದವರು–ಕೇಂದ್ರದ ಮಾಜಿ ಸಚಿವ ಆರ್. ರೆಹಮಾನ್ ಖಾನ್.
- ಅಣ್ಣಿಪುರ ಗ್ರಾಮದ 2.30 ಎಕರೆ (ಲಾಲ್‌ಬಾಗ್ ಹಾಪ್‌ಕಾಮ್ಸ್ – ಸರ್ವೇ ನಂ.18)/ ಒತ್ತುವರಿದಾರರು – ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಖಾಲಿದ್ ಅಹಮದ್, ಮಾಜಿ ಸಚಿವ ಎ.ಎಂ. ಹಿಂಡಸಗೇರಿ.
- ಆಸ್ತಿ ಸಂಖ್ಯೆ 10 ಹಜರತ್ ನವಾಬ್ ಇಬ್ರಾಹಿಂ ಆಲಿ ಷಾ ಕುಂಬಾರ ಪೇಟೆ/ ಒತ್ತುವರಿದಾರರು ಸಿ.ಎಂ. ಇಬ್ರಾಹಿಂ.

- ಆಸ್ತಿ ಸಂಖ್ಯೆ 22–23, ಪಿಳ್ಳೆಯಾರ್ ಕೊಯಿಲ್ ಸ್ಟ್ರೀಟ್ ನಂ.17 (ಹಳೆಯ ನಂ.120) ಮಕಾನ್ ರಸ್ತೆ, ವಿಸ್ತೀರ್ಣ 7,329 ಚದರ ಅಡಿ /ಒತ್ತುವರಿದಾರರು–ಮಹಮದ್ ಗೌಸ್, ಭಕ್ಷಿ ಖಾನ್, ಮುತಾವಳಿ: ಎಂ.ವಿ. ಮಹಮದ್ ಬಶೀರ್ ಭಾಗಿದಾರರು, ಮಾಜಿ ಸಚಿವ ರೋಷನ್ ಬೇಗ್.

- ಬಡೇಪುರ ಗ್ರಾಮದಲ್ಲಿ ಒಟ್ಟು 10.05 ಎಕರೆ (ಸರ್ವೇ ನಂ.2–5,7–9,11,13) / ಒತ್ತುವರಿದಾರರು–ತಾಹೇರಾ ಹ್ಯಾರಿಸ್ (ಶಾಸಕ ಹ್ಯಾರಿಸ್ ಪತ್ನಿ) ಸುರೈಯ ಮಹಮದ್ (ಹ್ಯಾರಿಸ್ ತಾಯಿ) ಗಯಾಸುಲ್ಲಾ ಷರೀಫ್ (ಹ್ಯಾರಿಸ್ ಆಪ್ತ ಸಹಾಯಕ) ಭಾಗಿಯಾದವರು.

- ಬಿಳೇಕಹಳ್ಳಿಯಲ್ಲಿ ಒಟ್ಟು 602.29 ಎಕರೆ ಪೈಕಿ 122.20 ಎಕರೆ 50 ಜನರಿಗೆ ಮಂಜೂರು, ಉಳಿದಿದ್ದನ್ನು ಕಾನೂನು ಬಾಹಿರವಾಗಿ ವಿಲೇ (ಸರ್ವೇ ನಂ.55)/ ಒತ್ತುವರಿದಾರರು – ಉಬೆದುಲ್ಲಾ ಷರೀಫ್ ಹಾಗೂ ಇತರೆ 50 ಮಂದಿ ಭಾಗಿಯಾದವರು ದಿ.ಸಿ.ಕೆ. ಜಾಫರ್ ಷರೀಫ್.

- ರಾಮನಗರ ಜಿಲ್ಲೆ ರಿಫಾಬುಲ್ ಮುಸ್ಲಿಮಿನ್ ಮೈಸೂರಿನ ಸಯ್ಯಾಜಿರಾವ್ ರಸ್ತೆ ಹಾಗೂ ಅಕ್ಬರ್ ರಸ್ತೆಯಲ್ಲಿರುವ ಮಜಿದ್ ಏ ಬಗ್ಬಾನ್  ಎದುರಿಗಿರುವ ಖಾಲಿ ಜಾಗ/ ಒತ್ತುವರಿದಾರರು – ತಾಜ್ ಮಹಮದ್ ಖಾನ್ ( ಮಾಜಿ ಸಚಿವ ದಿ. ಅಜೀಜ್ ಸೇಠ್)

- ಕೊಪ್ಪಳ ಜಿಲ್ಲೆ: ಗಂಗಾವತಿಯಲ್ಲಿ ಇಸ್ಲಾಂಪುರದ ಜಾಮಿಯಾ ಮಸೀದಿಗೆ ಸೇರಿದ 2 ಎಕರೆ (ಸರ್ವೇ ನಂ.56/2) ಒತ್ತುವರಿದಾರರು – ಮಾಜಿ ಸಚಿವ ಇಕ್ಬಾಲ್ ಅನ್ಸಾರಿ

- ಗಂಗಾವರಿಯ ಬೇರೂನಿ ಅಬಾದಿ ಮಸೀದಿಗೆ ಸೇರಿದ 2.09 ಎಕರೆ) ಸರ್ವೇ ನಂ.10/1, 10/2, 10/3/ ಒತ್ತುವರಿದಾರರು ಮಾಜಿ ಸಚಿವ ಇಕ್ಬಾಲ್ ಅನ್ಸಾರಿ.

ಆಧಾರ:ಉದಯವಾಣಿ, ದಿನಾಂಕ:24.09.2020